




# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು (ಜುಲೈ ೨೦೨೫)

**ಹೊಸ ಶಾಖಾಕೇಂದ್ರ :** ಆಂಧ್ರಪ್ರದೇಶದ **ನೆಲ್ಲೂರು** ಶ್ರೀ ರಾಮಕೃಷ್ಣ ಸೇವಾಶ್ರಮವನ್ನು ರಾಮಕೃಷ್ಣ ಮಿಷನ್‌ಗೆ ಸೇರ್ಪಡೆಗೊಳಿಸಲಾಗಿದ್ದು, ಹೊಸ ಶಾಖಾಕೇಂದ್ರವನ್ನು ಆರಂಭಿಸಿರುವುದರ ಗುರುತಾಗಿ ವಿಶೇಷ ಕಾರ್ಯಕ್ರಮಗಳನ್ನು ಜೂನ್ ೧ ರಂದು ಹಮ್ಮಿಕೊಳ್ಳಲಾಗಿತ್ತು . ವಿಶೇಷ ಪೂಜೆ, ಹೋಮ, ಸಾರ್ವಜನಿಕ ಸಭೆ ಇವುಗಳನ್ನು ನಡೆಸಲಾಯಿತು.

**ಶಾಖಾಕೇಂದ್ರಗಳ ಚಟುವಟಿಕೆಗಳು: ಭಾರತದಲ್ಲಿ :** ಜೂನ್ ೨೨ರಂದು **ವೃಂದಾವನ**ದಲ್ಲಿ ನರ್ಸಿಂಗ್ ಶಾಲೆಯ ಹೊಸ ಹೆಚ್ಚುವರಿ ಬ್ಲಾಕನ್ನು ಉದ್ಘಾಟಿಸಲಾಯಿತು.

**ಕಲ್ಯಾಣಿ** ಕೇಂದ್ರದಲ್ಲಿ 'ಬ್ರಹ್ಮಾನಂದ ಸಾಧುನಿವಾಸ'ದ ಎರಡನೇ ಅಂತಸ್ತನ್ನು ಉಪಾಧ್ಯಕ್ಷರಾದ ಪೂಜ್ಯ ಸ್ವಾಮಿ ಸುಹಿತಾನಂದಜಿ ಮಹಾರಾಜ್ ಜೂನ್ ೨೫ರಂದು ಉದ್ಘಾಟಿಸಿದರು. ಜಗನ್ನಾಥ ರಥಯಾತ್ರೆಯ ದಿನವಾದ ಜೂನ್ ೨೭ರಂದು ಇಲ್ಲಿನ ದೇವಾಲಯದಲ್ಲಿ ಶ್ರೀಮಾತೆ ಹಾಗೂ ಸ್ವಾಮೀಜಿಯವರ ಹೊಸ ಭಾವಚಿತ್ರಗಳನ್ನು ಸ್ಥಾಪಿಸಿದರು.

ವಿವೇಕಾನಂದ ವಿಶ್ವವಿದ್ಯಾಲಯದ (**RKMVERI**) ವಾರ್ಷಿಕ ಘಟಿಕೋತ್ಸವವು ಜುಲೈ ೪ರಂದು ಬೇಲೂರು ಮಠದಲ್ಲಿ ನೆರವೇರಿತು. ೩೯೭ ಮಂದಿ ಅಭ್ಯರ್ಥಿಗಳಿಗೆ ಪದವಿಪ್ರಧಾನ ಮಾಡಲಾಯಿತು. ಉಪಾಧಕ್ಷ್ಯರಾದ ಪೂಜ್ಯ ಸ್ವಾಮಿ ಭಜನಾನಂದಜಿ, ಪ್ರಧಾನ ಕಾರ್ಯದರ್ಶಿ ಸ್ವಾಮಿ ಸುವೀರಾನಂದಜಿ, ಕೇಂದ್ರ ಸಚಿವರಾದ ಡಾ. ಸುಕಾಂತ ಮಜುಮ್‌ದಾರ್ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

**ಗರ್ಬೆಟಾ** ಕೇಂದ್ರದ ನವೀಕೃತ ಶ್ರೀರಾಮಕೃಷ್ಣ ದೇವಾಲಯವನ್ನು ಜುಲೈ ೫ರಂದು ಸ್ವಾಮಿ ಸುಹಿತಾನಂದಜಿಯವರು ಲೋಕಾರ್ಪಣೆ ಮಾಡಿದರು. ವಿಶೇಷ ಪೂಜೆ, ಚಂಡೀಹೋಮ ಇತ್ಯಾದಿ ಕಾರ್ಯಕ್ರಮಗಳು ನಡೆದವು.

**RKMVERI** ಕೇಂದ್ರದ ಅರಾಪಂಚ್‌ನಲ್ಲಿರುವ ಕೃಷಿ ವಿಜ್ಞಾನ ಕೇಂದ್ರ(KVK)ದಲ್ಲಿ Centre for One Health ಕಟ್ಟಡವನ್ನು ಸ್ವಾಮಿ ಭಜನಾನಂದಜಿಯವರು ಜುಲೈ ೧೦ರಂದು ಉದ್ಘಾಟಿಸಿದರು. ಜನರ ಹಾಗೂ ಪರಿಸರದ ಆರೋಗ್ಯ ಕುರಿತಾದ ಅಧ್ಯಯನ, ಸಂಶೋಧನೆಗಳು ಇಲ್ಲಿ ನಡೆಯಲಿವೆ.

**ನರೋತ್ತಮನಗರ** ಕೇಂದ್ರದಲ್ಲಿ ನೌಕರ ಭವನ ಹಾಗೂ ಅತಿಥಿಗೃಹ 'ಪ್ರೇಮಾನಂದ ಭವನ'ವನ್ನು ಜುಲೈ ೨೪ರಂದು ಸ್ವಾಮಿ ಸುಹಿತಾನಂದಜಿಯವರು ಉದ್ಘಾಟಿಸಿದರು.

**ವಿದೇಶಗಳಲ್ಲಿ :** ಬಾಂಗ್ಲಾದೇಶದ **ದಿನಾಜ್‌ಪುರ** ಕೇಂದ್ರದಲ್ಲಿ ಎರಡು ದಿನಗಳ ಸಾಹಿತ್ಯ ಸಮಾಗಮ ಕಾರ್ಯಕ್ರಮ ಜುಲೈ ೪ ಹಾಗೂ ೫ರಂದು ನಡೆಯಿತು. ಸ್ವಾಮಿ ವಿವೇಕಾನಂದರ ಬಾಂಗ್ಲಾದೇಶ ಭೇಟಿಯ ೧೨೫ನೇ ವಾರ್ಷಿಕೋತ್ಸವದ ಆಚರಣೆಯ ಅಂಗವಾಗಿ ಈ ಕಾರ್ಯಕ್ರಮ ನಡೆಯಿತು.

**ಬಟ್ಟಿಕಲೋವ**ದಲ್ಲಿರುವ ಕೊಲಂಬೋ ಕೇಂದ್ರದ ಉಪ-ಕೇಂದ್ರದಲ್ಲಿ ಬಾಲಕಿಯರ ವಸತಿನಿಲಯದಲ್ಲಿ ಶ್ರೀಮಾತೆ ಶಾರದಾದೇವಿಯವರ ನವೀಕೃತ ದೇವಾಲಯವನ್ನು ಜುಲೈ ೬ರಂದು ಉದ್ಘಾಟಿಸಲಾಯಿತು.

ಅಮೆರಿಕದ **ಬರ್ಕ್‌ಲಿ** ಕೇಂದ್ರವು ಸ್ವಾಮಿ ವಿವೇಕಾನಂದರ ಸ್ಯಾನ್‌ಫ್ರಾನ್ಸಿಸ್ಕೋ ಭೇಟಿಯ ೧೨೫ನೇ ವಾರ್ಷಿಕೋತ್ಸವದ ಆಚರಣೆಯ ಅಂಗವಾಗಿ ಫೆಬ್ರವರಿಯಿಂದ ಜುಲೈ ತಿಂಗಳವರೆಗೆ ಧರ್ಮಸಮನ್ವಯ ಕಾರ್ಯಕ್ರಮ, ಆಧ್ಯಾತ್ಮಿಕ ಶಿಬಿರ ಹಾಗೂ ವಿಚಾರ ಸಂಕಿರಣಗಳನ್ನು ನಡೆಸಿತು.







Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020